# ಕಾಮನ ಬಿಲ್ಲು

## A ಶಬ್ದವನ್ನು ಊಹಿಸಿ

ಖಾಲಿ ಬಿಟ್ಟ ಜಾಗದಲ್ಲಿ ಕೆಳಗೆ ಕೊಟ್ಟಿರುವ ಆಯ್ಕೆ ಕಾಲಂನಿಂದ ಆರಿಸಿ ತುಂಬಿ. ಯಾವ ಶಬ್ದ ಇರಬಹುದು?

| | | | | |
|---|---|---|---|---|
| ಎಫ್ | ಪಿ | ಎಂ | ಸಿ | |
| ಎ | ಇ | ಐ | ಒ | |
| ಡಿ | ಒ | ಎಲ್ | ಡಿ | |
| ಇ | ಎನ್ | ಕೆ | ಇ | |



ಆಯ್ಕೆ ಇಲ್ಲಿದೆ..

| 1 | 2 | 3 |
|---|---|---|
| ಬಿ | ಆರ್ | ಎಫ್ |
| ಒ | ಯು | ಎ |
| ಟಿ | ಎಸ್ | ಟಿ |
| ಎಚ್ | ಟಿ | ಇ |

## B ಬುದ್ಧಿಗೆ ಗುದ್ದು

**1**



ರತನ್‌ಲಾಲ್ ಮತ್ತು ಆತನ ಗೆಳೆಯ ಶ್ಯಾಮ್ ಅಸ್ಸಾಂನ ಕಾಝಿರಂಗ ರಾಷ್ಟ್ರೀಯ ಉದ್ಯಾನದಲ್ಲಿ ಅಡ್ಡಾಡಿದ ಬಳಿಕ ರಾತ್ರಿ ಮಲಗಿದರು. ಬೆಳಿಗ್ಗೆ ಎದ್ದಾಗ ರತನ್‌ಲಾಲ್‌ನ ಪೈಜಾಮ ಜೇಬಿನಲ್ಲಿ ಏನೋ ಇದ್ದ ಹಾಗೆ ಸದ್ದಾಯಿತು. ಅದಕ್ಕೆ 'ಹೆಡ್ ಅಂಡ್ ಟೈಲ್' ಇತ್ತು. ಆದರೆ ಕಾಲುಗಳಿರಲಿಲ್ಲ. ತಾನು ನಡೆದಾಡಿದರೆ ಅದು ಮತ್ತೆ ಸದ್ದು ಮಾಡಬಹುದು ಎಂದು ಆತ ಗಾಬರಿಯಾದ. ಮತ್ತೆ ಜೇಬಿಗೆ ಕೈ ಹಾಕಿ ನೋಡಿದರೆ ಅವನಿಗೆ ನಗು ತಡೆಯಲಾಗಲಿಲ್ಲ. ಹಾಗಾದರೆ ರತನ್ ಲಾಲ್ ನಕ್ಕಿದ್ದು ಏಕೆ? ಊಹಿಸಬಲ್ಲಿರಾ..?

**2**

ಡಾಗ್ಲು ಎಂಬ ಕಳ್ಳನನ್ನು ಮೂರು ಮಂಗಗಳ ಜತೆಗೆ ಒಂದು ಕೋಣೆಯಲ್ಲಿ ಕೂಡಿ ಹಾಕಲಾಯಿತು. ಒಂದು ಮಂಗನ ಕೈಯ್ಯಲ್ಲಿ ಬಾಳೆ ಹಣ್ಣು, ಮತ್ತೊಂದು ಮಂಗನ ಕೈಯ್ಯಲ್ಲಿ ಕೋಲು ಹಾಗೂ ಇನ್ನೊಂದು ಮಂಗನ ಕೈಯ್ಯಲ್ಲಿ ಏನೂ ಇರಲಿಲ್ಲ. ಹಾಗಾದರೆ ಇಲ್ಲಿ ಪ್ರಧಾನ ಪ್ರಾಣಿ ವರ್ಗ (ಪ್ರೈಮೇಟಿಸ್) ಯಾವುದು?




## C ಥಟ್ ಅಂತ ಉತ್ತರಿಸಿ




ಒಬ್ಬ ವ್ಯಕ್ತಿ ಕತ್ತಲೆ ಕೋಣೆಯೊಳಗಿರುವ ಡ್ರಾವರ್‌ನಿಂದ ಒಂದು ಜೊತೆ ಸಾಕ್ಸ್ ಪಡೆಯಬೇಕಾಗಿತ್ತು. ಆ ಡ್ರಾವರ್‌ನಲ್ಲಿದ್ದ ಸಾಕ್ಸ್‌ಗಳೆಲ್ಲವೂ ಬಣ್ಣದ ಹೊರತಾಗಿ ಎಲ್ಲ ಒಂದೇ ತರದವು. ಅಲ್ಲಿ 12 ಜೊತೆ ಕಂದು ಮತ್ತು 12 ಜೊತೆ ಕಪ್ಪು ಬಣ್ಣದ ಸಾಕ್ಸ್‌ಗಳಿದ್ದರೆ ಆತ ಒಂದು ಸರಿಯಾದ ಜೊತೆ ಸಾಕ್ಸ್ ಪಡೆಯಲು ಒಟ್ಟು ಎಷ್ಟು ಸಾಕ್ಸ್‌ಗಳನ್ನು ತೆಗೆದುಕೊಳ್ಳಬೇಕು?

## D ಗ್ಲಾಸ್ ಚಮತ್ಕಾರ..!

ಕೆಳಗೆ ಕೊಟ್ಟಿರುವ ಗೆರೆಗಳನ್ನು ಬಳಸಿ ಗ್ಲಾಸ್ ರಚಿಸಿ. ಇದರೊಳಗೆ ಐಸ್ ಕ್ಯೂಬ್‌ಗಳನ್ನು ಹಾಕಿ.



### ಉತ್ತರಗಳು



ಎ.) 2- ರಸ್ಟ್ (ಆರ್‌ಯುಎಸ್‌ಟಿ), ಪ್ರತಿ ಕಾಲಂನಿಂದಲೂ ಮೂರು ಅಕ್ಷರಗಳನ್ನು ಬಳಸಿ ಶಬ್ದ ರಚಿಸಬೇಕು. (ಡಿಇಎಫ್, ಎನ್‌ಒಪಿ, ಕೆಎಲ್‌ಎಂ, ಸಿಡಿಇ, ಆರ್‌ಎಸ್‌ಟಿ). ಎರಡನೇ ಲೈನ್‌ನಲ್ಲಿ ಐದು 'ಓವೆಲ್'ಗಳಾದ ಎಇಐಒಯು ಬರುತ್ತದೆ.

ಬಿ) 1. ಅದು ನಾಣ್ಯ ಎಂದು ರತನ್‌ಲಾಲ್‌ಗೆ ತಿಳಿದ ಕಾರಣ ನಗು ಬಂತು.

2. ಡಾಗ್ಲು. ಮನುಷ್ಯರೂ ಒಂದು ಪ್ರೈಮೇಟಿಸ್.

ಸಿ) 13

ಡಿ)

355 / © 2010 Amrita Bharati, Bharatiya Vidya Bhavan